# ಅಭಿಜಾತ ಕನ್ನಡ

ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ
ದ್ವೈಮಾಸಿಕ ಸಂಶೋಧನಾ ಪತ್ರಿಕೆ

# ABHIJATA KANNADA

Peer Reviewed Referred Journal ISSN : 2347-4017
ರೆಫರೀಡ್ ಜರ್ನಲ್

2347-4017- ಸೆಪ್ಟಂಬರ್ - ಅಕ್ಟೋಬರ್ 2021 ಸಂಪುಟ-7 ಸಂಚಿಕೆ-5
eptember - October 2021 Vol-7 Issue-5



ಪ್ರಧಾನ ಸಂಪಾದಕರು
ಪ್ರೊ. ಎಸ್. ಎಂ. ಗಂಗಾಧರಯ್ಯ

vivo Y72 5G

# ಅಭಿಜಾತ ಕನ್ನಡ

ದ್ವೈಮಾಸಿಕ ಸಂಶೋಧನಾ ಪತ್ರಿಕೆ
(ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ)

## ABHIJATA KANNADA

Peer Reviewed Referred Journal with ISSN : 2347-4017

ಸೆಪ್ಟೆಂಬರ್-ಅಕ್ಟೋಬರ್ 2021 ಸಂಪುಟ-7 ಸಂಚಿಕೆ-5
September-October 2021 Vol-7 Issue-5

ಪ್ರಧಾನ ಸಂಪಾದಕರು
**ಪ್ರೊ. ಎಸ್. ಎಂ. ಗಂಗಾಧರಯ್ಯ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ಕೊಟ್ರಸ್ವಾಮಿ. ಎ.ಎಂ.ಎಂ.**

ವ್ಯವಸ್ಥಾಪಕ ಸಂಪಾದಕರು
**ಡಾ. ಕೆ.ಎಂ. ರೋಹಿಣಿ**

ಸಂಪಾದಕರು
**ಡಾ. ಶೋಭಾ ನಾಯಕ**
**ಡಾ. ಪಿ. ನಾಗರಾಜ**
**ಡಾ. ಹಾ.ಮಾ. ನಾಗಾರ್ಜುನ**
**ಡಾ. ದುರ್ಗಾ ಪ್ರವೀಣ**
**ಡಾ. ಸಾವುಕಾರ ಕಾಂಬಳೆ**

ಪ್ರಕಾಶನ : ಪ್ರತಿಭಾನ (ಒಂದು ಬೌದ್ಧಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ)
ನಾದಪ್ರಸಂಗ(ರಿ) ಬೆಂಗಳೂರು ಇದರ ಅಂಗಸಂಸ್ಥೆ
(Reg. No. BMH-4-00002-2010-11 Dt. 03-04-2010 Under Trust Act
Colum 10/A, 1957)
ನಂ. 133, 'ಶಿವಾದ್ವೈತ', ಸೆಕ್ಟರ್-2, ಶಿವಬಸವನಗರ
ಬೆಳಗಾವಿ-590010, ದೂ: 9448324100

vivo Y72 5G

# ಅಭಿಜಾತ ಕನ್ನಡ

ದ್ವೈಮಾಸಿಕ ಸಂಶೋಧನಾ ಪತ್ರಿಕೆ

(ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ)

❖❖

**ಚಂದಾ ವಿವರ**

ವಾರ್ಷಿಕ ಚಂದಾ : 1000/- (ಒಂದು ಸಾವಿರ ರೂಪಾಯಿಗಳು)

ಬಿಡಿ ಪ್ರತಿ ಒಂದಕ್ಕೆ : 200/- ರೂಪಾಯಿಗಳು

❖❖

**ಲೇಖನಗಳನ್ನು ಕಳಿಸುವ ಇ-ಮೇಲ್ ವಿಳಾಸ**

kotraswamyamm@gmail.com

or

abhijatakannada@gmail.com

**ಪತ್ರ ವ್ಯವಹಾರದ ವಿಳಾಸ**

**ವ್ಯವಸ್ಥಾಪಕ ಸಂಪಾದಕರು**

**ಅಭಿಜಾತ ಕನ್ನಡ**

ಕನ್ನಡ ದ್ವೈಮಾಸಿಕ ಸಂಶೋಧನಾ ಪತ್ರಿಕೆ

ನಂ-133, ಶಿವಾದ್ವೈತ, ಸೆಕ್ಟರ್-2,

ಶಿವಬಸವನಗರ, ಬೆಳಗಾವಿ-590010

ಮೊಬೈಲ್ : 6360414511

ಇ- ಮೇಲ್ abhijatakannada@gmail.com

**ABHIJATA KANNADA**

Bimonthly Peer Reviewed Referred Journal with

**ISSN:2347-4017** September-October 2021, Vol-7 Issue-5

Chief Editor : **Prof. S.M. Gangadharaiah**

Executive Editor : **Dr. Kotraswamy. A.M.M.**

Managing Editor : **Dr. K.M. Rohini**

Editors : **Dr. ShobaNayak,** Assistant Professor
RCU, Belagavi

**Dr. P. Nagaraja,** Assistant Professor
RCU, Belagavi

**Dr. H.M. Nagarjuna,** Assistant Professor
Sahyadri Science College, Shimoga

**Dr. Durgapraveen,** Assistant Professor
Dravidian University, Kuppam, AP

**Dr. Savakar Kamble**
Assistant Professor, RCU, Belagavi

PUBLISHER : **PRATHIBHANA**
(An Intellectual & Cultural Form)
A Division of NADAPRASANGA (Reg.)
Under Karnataka Trust Act -10/A 1957,
Reg. No. BMH-4-00002-2010-11
Dt. 03-04-2010.

ADDRESS : No133, 'Shivadwaita', Sector II,
Shivabasavanagara, Belagavi-590010
Ph. 9448324100

PRINTER : Sri Vasavi Offset Printers, Bagalkot,
Ph: 0835-4297406

vivo Y72 5G

ಅಭಿಜಾತಕನ್ನಡ
ದ್ವೈಮಾಸಿಕ ಸಂಶೋಧನಾ ಪತ್ರಿಕೆ
(ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ)
ಸೆಪ್ಟೆಂಬರ್-ಅಕ್ಟೋಬರ್ 2021 ಸಂಪುಟ-7 ಸಂಚಿಕೆ-5

ಪರಿಶೀಲಕ ಮಂಡಳಿ

ಪ್ರೊ. ಸಿ. ನಾಗಭೂಷಣ
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಪ್ರೊ. ಎಸ್.ಎಂ. ಗಂಗಾಧರಯ್ಯ
ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಪ್ರೊ. ಡಿ.ವಿ. ಪರಮಶಿವಮೂರ್ತಿ
ಪ್ರಾಧ್ಯಾಪಕರು
ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಪ್ರೊ. ಎಂ.ಜಿ. ಮಂಜುನಾಥ
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು

ಪ್ರೊ. ಧನವಂತ ಹಾಜವಗೋಳ
ಪ್ರಾಧ್ಯಾಪಕರು
ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಎಂ. ನಾಗರಾಜ
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ತೊರವಿ, ವಿಜಯಪುರ

vivo Y72 5G

ABHIJATA KANNADA

Peer Reviewed Referred Journal with ISSN : 2347-4017

September-October 2021 Vol-7 Issue -5

## PEER REVIEW COMMITTEE

**Prof. C. NAGABHUSHANA**
Professor
Centre for Kannada Studies
Jnanabharathi, Bangalore University
Bangalore

**Prof. S.M. GANGADHARAIAH**
Professor
School of Classical Kannada Studies
Rani channamma University Vidyasangama Belagavi

**Prof. D.V. PARAMASHIVAMURTHY**
Professor
Dr. D.V. Gundappa Centre for Kannada Studies,
Tumkur University, Tumkur

**Prof. M.G. MANJUNATH**
Professor
Kuvempu Institute of Kannada Studies
Mysore University, Manasa Gangothri, Mysore

**Prof. DHANAVANTA HAJAVAGOLA**
Professor
Dr R.C. Hiremath Kannada Chair
Karnataka University, Pavate Nagar, Dharwad

**Dr. M. NAGARAJA**
Associate Professor
Department of Kannada Studies
Akkamahadevi Women University, Toravi, Vijayapura

vivo Y72 5G

# ಪರಿವಿಡಿ

೧. ಸೃಜನಶೀಲ ಲೇಖಕಿ ವಾಣಿ : ಒಂದು ಪ್ರತ್ಯವಲೋಕನ / ೯
❖ ಪ್ರೊ. ಎಸ್. ಎಂ. ಗಂಗಾಧರಯ್ಯ

೨. ಕರಾವಳಿಯ ಜನಪದ ನಾಯಕ : ಕುಮಾರರಾಮ / ೧೫
❖ ಡಾ. ಗಜಾನನ ನಾಯ್ಕ

೩. ಹಡಪದ ಲಿಂಗಮ್ಮನ ವಚನಗಳು : ಭಕ್ತಿ ನಿರ್ವಚನ / ೨೧
❖ ಡಾ. ಪಿ. ನಾಗರಾಜ

೪. ಮಡಿವಾಳ ಮಾಚಿದೇವನ ವಚನಗಳಲ್ಲಿ ಗಾದೆಗಳು / ೨೯
❖ ಡಾ. ಎಂ. ನಾಗರಾಜ

೫. ಜಾವಳಿ : ಶೃಂಗಾರ ಹಾಗೂ ಭಕ್ತಿ ರಚನೆಯ ಅನುಸಂಧಾನ / ೩೬
❖ ಡಾ. ಕೆ.ಎಂ. ರೋಹಿಣಿ

೬. 'ಬಟ್ಟಮತಂ' ಕೃತಿಯ ಛಂದಸ್ಸು ಮತ್ತು ಷಡ್ಜಳಿ:
ಒಂದು ಟಿಪ್ಪಣಿ / ೪೧
❖ ಡಾ. ಕೊಟ್ರಸ್ವಾಮಿ. ಎ.ಎಂ.ಎಂ.

೭ ಮಣೆಗಾರ ಆತ್ಮಕಥನ : ಅಂಬೇಡ್ಕರ್ ಚಿಂತನೆಗಳು / ೪೮
❖ ಅರುಣ ಎಸ್.ಪಿ.

೮. ಜನಪದ ಸಾಹಿತ್ಯ ಸಂಗ್ರಹ : ಒಂದು ಅವಲೋಕನ / ೫೨
❖ ಡಾ. ನಾಗರೆಡ್ಡಪ್ಪ ಹೆಚ್

೯. ಅಂಬೇಡ್ಕರ್ ಅವರ ಸಂಘಟನಾತ್ಮಕ ನೆಲೆ / ೫೮
❖ ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್

೧೦. ಬಯಲಾಟ ಮತ್ತು ಬುಡಕಟ್ಟು ಸಮುದಾಯಗಳ
ಕಲಾ ಅನನ್ಯತೆ / ೬೩
❖ ಡಾ. ರಾಜಕುಮಾರ

೧೧. ರತ್ನಾಕರವರ್ಣಿಯ ಭರತೇಶ ವೈಭವ : ಶೃಂಗಾರರಸ / ೬೮
❖ ಉಷಾ ಹೆಚ್.ಪಿ.

೧೨. ರಾಯಚೂರಿನ ಆಧುನಿಕ ತತ್ವಪದಕಾರ- ಎನ್.ಬಿ. ಲಕ್ಷ್ಮೀರೆಡ್ಡಿ ಹೊಸೂರು / ೭೨

❖ ಡಾ. ಮಲ್ಲಯ್ಯ

೧೩. ಕಲಚುರಿ ವಂಶದ ಇಮ್ಮಡಿ ಬಿಜ್ಜಳನ ದಾನ ದತ್ತಿಗಳು / ೭೮

❖ ಬೆಟ್ಟಲಿಂಗದೇವರು ಬಿ.ಎಸ್.

❖ ಪ್ರೊ. ಡಿ.ವಿ. ಪರಮಶಿವಮೂರ್ತಿ

೧೪. ಜೀವನ ಚರಿತ್ರೆ ಮತ್ತು ಆತ್ಮಚರಿತ್ರೆ ಅಧ್ಯಯನಗಳ ಸಾಮಾಜಿಕ ಪ್ರಭಾವಗಳು / ೮೬

❖ ಮಂಗಳ. ಎನ್

೧೫. ಮಹಿಳೆ – ನೇಕಾರಿಕೆ : ಸಮಸ್ಯೆಗಳು / ೯೪

❖ ಸುವರ್ಣಾ ರೇ. ಕಲ್ಯಾಣಶೆಟ್ಟಿ

❖ ಡಾ. ಶಿವಲೀಲಾ ಬಸವರಾಜ

೧೬. ದೇಶಿ ಗಾಯನ ಪರಂಪರೆ : ಒಂದು ಅವಲೋಕನ / ೧೦೦

❖ ಅಂಜಮ್ಮ

❖ ಡಾ. ಜಯದೇವಿ ಜಂಗಮಶೆಟ್ಟಿ

೧೭. ಅಮೃತಮತಿ : ಮನೋಮತಿ / ೧೦೬

❖ ಭೋಜರಾಜ ಟಿ.ಎಸ್.

❖ ಡಾ. ಶೋಭಾ ನಾಯಕ

೧೮. ಮಕ್ಕಳ ಕವಿತೆಗಳಲ್ಲಿ ಪ್ರಾದೇಶಿಕ ಭಾಷಾ ಪ್ರಭೇದಗಳ ಬಳಕೆ / ೧೧೩

❖ ಗಂಗಯ್ಯ ಬಿ.ಎಸ್.

❖ ಡಾ. ಎಸ್.ಎಂ. ದುರ್ಗಾ ಪ್ರವೀಣ

೧೯. ಕೋಲಾರ ಜಿಲ್ಲೆಯ ಸಣ್ಣಕಥೆಗಳ ಭಾಷಿಕ ವಿನ್ಯಾಸ / ೧೨೦

❖ ಗಿರೀಶ್ ವೈ

❖ ಡಾ.. ಜಯಲಲಿತ

vivo Y72 5G

# ೧೫. ಮಹಿಳೆ – ನೇಕಾರಿಕೆ : ಸಮಸ್ಯೆಗಳು

ಸುವರ್ಣಾ. ರೇ. ಕಲ್ಯಾಣಶೆಟ್ಟಿ
ಡಾ. ಶಿವಲೀಲಾ. ಬಸವರಾಜ

ನಮ್ಮ ಭಾರತ ದೇಶ ವೈವಿಧ್ಯತೆಯಲ್ಲಿ ಏಕತೆ ಎಂಬ ಗುಣಲಕ್ಷಣವನ್ನು ಹೊಂದಿದೆ. ನಮ್ಮ ದೇಶ ಆಹಾರ ಪದ್ಧತಿಯು ಜೊತೆಗೆ ಉಡುಪ ತೊಡಪುಗಳಲ್ಲಿಯೂ ವೈವಿಧ್ಯತೆ ಇರುವುದನ್ನು ನಾವು ಕಾಣುತ್ತೇವೆ. ಅದರಲ್ಲೂ ಸೀರೆ ಇದು ನಮ್ಮ ದೇಶದ ಮತ್ತು ಕರ್ನಾಟಕ ರಾಜ್ಯದ ಸಾಂಸ್ಕೃತಿಕ ಉಡುಪು. ಹೀಗೆ ನಮ್ಮ ಮೂಲಭೂತ ಅವಶ್ಯಕತೆ ಆದಂಥ ಉಡುಪು ತೊಡಪು ತಯಾರಾಗ ಬೇಕಾದರೆ ಅದರ ಹಿಂದೆ ನೇಕಾರರ ಮತ್ತು ಮಹಿಳಾ ನೇಕಾರರ ಕೈ ಚಳಕ ಕುಶಲತೆ, ಕಲೆ ಬಹುಮುಖ್ಯ ಪಾತ್ರವಹಿಸುತ್ತದೆ. ನಮ್ಮ ದೇಶ ಅದರಲ್ಲೂ ಕರ್ನಾಟಕ ಸಮಾಜದ ಸಾಮಾಜಿಕ ರಚನೆ, ಅನೇಕ ಸಂಸ್ಕೃತಿ, ನೀತಿ ನಿಯಮಗಳು, ರೂಢಿ ಪರಂಪರೆಗಳು ,ಕಲೆ,ಕೌಶಲ್ಯಗಳ ಆಗರವಾಗಿದೆ.ಅದರಲ್ಲೂ ನೇಕಾರಿಕೆ ಇದು ಸಮಾಜದ ಬಹುಮುಖ್ಯ ಅಂಶವಾಗಿದೆ. ಬಾಗಲಕೋಟೆ ಜಿಲ್ಲೆ ಇದು ನೇಕಾರಿಕೆಗೆ ಪ್ರಸಿದ್ಧತಾಣವಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಗುಳೇದಗುಡ್ಡದ ಖಣ, ಇಲಕಲ್ಲ ಸೀರೆ ತೊಟ್ಟ ನಾರಿ ಯಾವ ಅಪ್ಸರೆಗಿಂತಲೂ ಕಮ್ಮಿ ಇಲ್ಲ ಅನ್ನೋ ಗಾದೆ ಮಾತಿನಂತೆ ಇದೆ. ಬಾಗಲಕೋಟ ಜಿಲ್ಲೆಯಲ್ಲಿ ಜಮಖಾನೆ ತಯಾರಿಕೆ, ಲುಂಗಿ,

---

**ಸುವರ್ಣಾ. ರೇ. ಕಲ್ಯಾಣಶೆಟ್ಟಿ** : ಸಂಶೋಧನಾ ವಿದ್ಯಾರ್ಥಿನಿ, ಸಮಾಜಶಾಸ್ತ್ರ ವಿಭಾಗ, ಎಸ್.ವಿ.ಎಂ. ಮಹಾವಿದ್ಯಾಲಯ, ಇಳಕಲ್ಲ – ೫೮೭೧೨೫

**ಮಾರ್ಗದರ್ಶಕರು** : ಡಾ. ಶಿವಲೀಲಾ ಬಸವರಾಜ, ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು ಕಲಬುರಗಿ ಜಿಲ್ಲೆ

vivo Y72 5G

ಟವೇಲ ಮುಂತಾದ ನೇಯ್ಗೆಗಾಗಿಯೂ ಪ್ರಸಿದ್ಧವಿದೆ. ಅದರಲ್ಲೂ ಚಿಮ್ಮಡಿ ಗ್ರಾಮವಿದು ಮಹಿಳಾ ನೇಕಾರಿಕೆಗಾಗಿಯೇ ಪ್ರಸಿದ್ಧವಿದೆ.

ನಮ್ಮ ಸಮಾಜದಲ್ಲಿ ಪಿತೃ ಪ್ರಧಾನ ಕುಟುಂಬ ಪದ್ಧತಿ ಇದೆ. ಇಲ್ಲಿ ಮಹಿಳೆ ನಾಲ್ಕು ಗೋಡೆಗಳ ಮಧ್ಯದಲ್ಲಿ ಕುಟುಂಬದ ನಿರ್ವಹಣೆ, ಮಕ್ಕಳ ಲಾಲನೆ-ಪಾಲನೆ, ಎಲ್ಲರ ಆರೈಕೆ, ಎಲ್ಲರಿಗಾಗಿ ಅಡುಗೆ ತಯಾರಿಸುವುದು, ಅಲ್ಲದೆ ಪುರುಷರಿಗೆ ಸೇವಕರಾಗಿ ಮುಂತಾದ ಪಾತ್ರಗಳನ್ನು ಅನುಸರಿಸುತ್ತಾ ದಿನವಿಡಿ ಮಹಿಳೆ ದಶಭುಜಬಲದಿಂದ ಕಾರ್ಯ ನಿರ್ವಹಿಸುತ್ತಿದ್ದಾಳೆ. ಸಮಾಜದರಚನೆ,ಆಚಾರ-ವಿಚಾರ, ಅವಶ್ಯಕತೆಗಳಿಗನುಗುಣವಾಗಿ ಸಮಾಜದ ರಚನೆಯಲ್ಲಿ ಬದಲಾದಂತೆ ಮಹಿಳೆಯು ಸಹಿತ ಆರ್ಥಿಕವಾಗಿ ಸಬಲಿಯಾಗುವ ದೃಷ್ಟಿಯಿಂದ ಮನೆಗೆಲಸದ ಜೊತೆಗೆ ಅದಕ್ಕೆ ಪೂರಕವಾಗಿರುವ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದಳು. ನೇಯ್ಗೆ ಕಾರ್ಯವಿದು ಮಹಿಳೆಯ ಕೌಟುಂಬಿಕ ಕಾರ್ಯಗಳ ಜೊತೆಗೆ ಮನೆಯಲ್ಲಿಯೇ ಇದ್ದು ನೇಯ್ಗೆ ಕಾರ್ಯ ನಿರ್ವಹಿಸಲು ಬರುವಂತಹದ್ದಾಗಿದ್ದ ರಿಂದ ಅನೇಕ ಮಹಿಳೆಯರು ನೇಕಾರಿಕೆ ಮತ್ತು ಅದಕ್ಕೆ ಪೂರಕವಾಗಿರುವಂತಹ ಅನೇಕ ಕಾರ್ಯಗಳನ್ನು ಮಾಡತೊಡಗಿದರು. ಸಮಾಜದಲ್ಲಿ ಹೆಚ್ಚುತ್ತಿರುವ ಬೆಲೆಗಳು, ಮೂಲಭೂತ ಸೌಕರ್ಯಗಳ ಕೊರತೆ, ಬಡತನ,ಆಧುನಿಕರಣದ ಪರಿಣಾಮವಾಗಿ ಇತ್ತೀಚಿಗೆ ನೇಕಾರಿಕೆಯನ್ನು ಮಾಡುವ ಜನರಿಗೆ ಜೀವನ ಸಾಗಿಸುವುದು ದುಸ್ತರವಾಗ ತೊಡಗಿದೆ. ಅದರಲ್ಲೂ ಮಹಿಳಾ ನೇಕಾರರು ಅನೇಕ ಸಮಸ್ಯೆಗಳ ಬಲೆಯಲ್ಲಿ ಸಿಲುಕಿದ್ದಾರೆ.

ಇಂದು ಮಹಿಳೆಯರು ತನ್ನನ್ನು ತಾನು ವಿವಿಧ ಕೆಲಸಗಳಲ್ಲಿ ತೊಡಗಿಸಿ ಕೊಂಡಿರುವುದನ್ನು ನಾವು ಗಮನಿಸುತ್ತೇವೆ ಸದ್ಯದ ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯು ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಮತ್ತು ಅದರಲ್ಲಿ ತನ್ನ ಕಾರ್ಯವನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದಾಳೆ. ಈ ಎಲ್ಲ ಕ್ಷೇತ್ರಗಳಲ್ಲಿ ಆಕೆ ಪುರುಷರಿಗೆ ಸರಿಸಮನಾಗಿ ದುಡಿಯುತ್ತಿದ್ದಾಳೆ. ನೇಕಾರಿಕೆ ಎಂಬ ಕ್ಷೇತ್ರದಲ್ಲಿ ಮಾತ್ರ ಮಹಿಳೆಯ ಕಾರ್ಯ ೧೦೦ ಕ್ಕೆ ೯೦% ಇದ್ದರೆ ೧೦% ಕಾರ್ಯ ಪುರುಷನದ್ದಾಗಿದೆ. ಇಷ್ಟೆಲ್ಲಾ ದುಡಿದರೂ ನೇಕಾರ ಮಹಿಳೆಗೆ ಯಾವುದೇ ಸ್ಥಾನಮಾನ, ಅಂತಸ್ತು ಸಮಾಜದಲ್ಲಿ ದೊರಕದೆ ಹಿಂದಿನಿಂದಲೂ ಇವತ್ತಿನ ತನಕ ಮಹಿಳೆ ತೆರೆಮರೆಯಲ್ಲಿ ಜೀವನ ಸಾಗಿಸುತ್ತಿದ್ದಾಳೆ. ಇಷ್ಟೆಲ್ಲಾ ಕಾರ್ಯ ಮಾಡಿದರೂ ನೇಕಾರಿಕೆಯ ಉದ್ಯೋಗದಲ್ಲಿ 'ನೇಕಾರನ ಹೆಂಡತಿ ಬೆತ್ತಲೆ' ಎಂಬ ಗಾದೆ ಮಾತಿನಂತೆ ಆಕೆ ಮಾಡುವ ಕಾರ್ಯಕ್ಕೆ ಯಾವುದೇ ಮೌಲ್ಯವಿಲ್ಲ ಎಂಬುದು ತಿಳಿದು ಬರುತ್ತದೆ.

vivo Y72 5G

ನೇಕಾರ ಮಹಿಳೆಯ ಸಮಸ್ಯೆಗಳನ್ನು ಅರಿಯುವುದಕ್ಕಿಂತ ಪೂರ್ವದಲ್ಲಿ ನಾವು ನೇಕಾರಿಕೆಯ ಕಾರ್ಯ ಕ್ಷೇತ್ರದ ಅಧ್ಯಯನ ಮಾಡೋಣ. ನೇಕಾರಿಕೆ ಇದು ಪುರುಷರು ಮತ್ತು ಮಹಿಳೆಯರು ಮಾಡುವಂಥಹ ಉದ್ಯೋಗವಾಗಿದೆ. ಈ ಉದ್ಯೋಗ ವರ್ಷದ ೩೬೫ ದಿನವೂ ಇದ್ದು, ಕೆಲವು ಕಾರಣಗಳಿಗಾಗಿ ಕೆಲವೊಂದು ದಿನ ಆಕೆಗೆ ಕೆಲಸ ಇರುವುದಿಲ್ಲ. ನೇಕಾರಿಕೆ ಉದ್ಯೋಗವನ್ನು ೪ ರೀತಿಯಾಗಿ ವಿಂಗಡಿಸಬಹುದು. ಅದು ಈ ಮುಂದಿನಂತಿದೆ : ೧. ಸ್ವತಂತ್ರವಾಗಿ ನೇಕಾರಿಕೆ ಮಾಡುವವರು ೨. ಮಾಲೀಕರ ಅಧೀನದಲ್ಲಿ ದುಡಿಯುವವರು ೩. ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ಮಹಿಳಾ ನೇಕಾರರು ೪. ಕರ್ನಾಟಕದ ಕೈ ಮಗ್ಗ ಅಭಿವೃದ್ಧಿಯ ಅಡಿಯಲ್ಲಿ ನೇಕಾರಿಕೆ ಮಾಡುವವರು

**೧. ಸ್ವತಂತ್ರವಾಗಿ ನೇಕಾರಿಕೆ ಮಾಡುವವರು:** ಇಲ್ಲಿ ನೇಕಾರರು ಸ್ವತಃ ನೂಲು ಮತ್ತು ಕಚ್ಚಾವಸ್ತುಗಳನ್ನುಖರೀದಿಸಿ ತಾವೇ ಸ್ವತಃ ಮಾರಾಟ ಮಾಡಬಹುದಾದ ಕಾರ್ಯ. ಇಲ್ಲಿ ಪುರುಷರು ಸೀರೆ ನೆಯ್ದರೆ ಅದಕ್ಕೆ ಪೂರಕ ಎಲ್ಲ ಕೆಲಸ ಮಹಿಳೆ ಮಾಡುವುದನ್ನುನಾವು ಕಾಣಬಹುದು . ನಮ್ಮ ಸಮಾಜ ಪುರುಷ ಪ್ರಧಾನ ಸಮಾಜವಾಗಿದ್ದರಿಂದ ಅವರ ಕಾರ್ಯಗಳಲ್ಲಿ ಹೆಚ್ಚು ಮಹಿಳಾ ನೇಕಾರರು ಕೆಲಸ ಮಾಡುತ್ತಾರೆ.ಇಂಥ ಪದ್ಧತಿಯಲ್ಲಿ ಸ್ವತಃ ನೇಕಾರನಿಗೆ ಮತ್ತು ಮಹಿಳಾ ನೇಕಾರರಿಗೆ ತುಲನಾತ್ಮಕವಾಗಿ ಅಧ್ಯಯನ ಮಾಡಿದಾಗ ಕಂಡು ಬರುವ ಅಂಶವೆಂದರೆ ಮಹಿಳಾ ನೇಕಾರರಿಗಿಂತ ಪುರುಷ ನೇಕಾರರಿಗೆ ಕಾರ್ಯದ ಲಾಭಾಂಶ ಜಾಸ್ತಿ ಇರುವುದನ್ನು ಕಂಡುಬರುತ್ತದೆ. ಆದರೆ ಕೆಲವೊಮ್ಮೆ ಮಾರುಕಟ್ಟೆಯ ಕೊರತೆಯುಂಟಾಗುತ್ತದೆ. ಕೆಲವೊಂದು ವಿಷಮ ಪರಿಸ್ಥಿತಿಯಲ್ಲಿ ಆತನಿಗೆ ಯಾವುದೇ ಭದ್ರತೆ ಇರುವುದಿಲ್ಲ.

**೨. ಮಾಲೀಕರ ಅಧೀನದಲ್ಲಿ ದುಡಿಯುವವ ನೇಕಾರರು** : ಇಂಥ ಪದ್ಧತಿಯ ಕಾರ್ಯದಲ್ಲಿ ನೇಕಾರರು ಕಚ್ಚಾ ವಸ್ತುವನ್ನು ಮಾಲೀಕರ ಕಡೆಯಿಂದ ತಂದು ಕೂಲಿಯ ರೂಪದಲ್ಲಿ ದುಡಿಯುತ್ತಾರೆ. ಇಂಥ ಕಾರ್ಯಗಳಲ್ಲಿ ಸರ್ವ ಸಾಮಾನ್ಯವಾಗಿ ಸ್ತ್ರೀ ಮತ್ತು ಪುರುಷ ನೇಕಾರರನ್ನು ನಾವು ಕಾಣಬಹುದು.ಇಲ್ಲಿ ನಾವು ೧೮ ಮಳ ಕೈಮಗ್ಗದಿಂದ ತಯಾರಿಸಿದ ಸೀರೆ ನೇಯಲು ೨ ರಿಂದ ೩ ದಿವಸ ಬೇಕಾಗುತ್ತದೆ.ಇಲ್ಲಿ ನೇಕಾರನಿಗೆ ೧ ಸೀರೆಯ ಹಿಂದೆ ೧೯೦ ರೂಪಾಯಿ ,೨೫೦ ರೂಪಾಯಿ ಕೂಲಿ ಸಿಗಬಹುದು,. ಅದೇ ರೀತಿಯಲ್ಲಿ ಪವರಲೂಮದ ನೇಕಾರಿಕೆಯಲ್ಲಿ ೬. ೨೦ ಮೀಟ ಸೀರರೆಗೆ ೬೦ ರೂಪಾಯಿಂದ ೮೦ ರೂಪಾಯಿವರೆಗೆ ಕೂಲಿ ಇದ್ದು ಒಬ್ಬ ವ್ಯಕ್ತಿ ದಿನಕ್ಕೆ ೩ ಸೀರೆಗಳನ್ನು ನೇಯಬಹುದು. ಅದೇ ರೀತಿಯಾಗಿ

vivo Y72 5G

ಕೈ ಮಗ್ಗಗಳಲ್ಲಿ ಗುಳೆದಗುಡ್ಡ ೪೧ ಖಣಗಳು ಅಂದರೆ ೨೦ ೧\೨ಮೀಟರ್ನೇಯ್ದರೆ ಅವರಿಗೆ ೧೧೦೦ ರೂ ತನಕ ಕೂಲಿ ಸಿಗಬಹುದು (೨ ಖಣ ಅಂದರೆ ೧ ಮೀಟರ್) ಅದೇ ರೀತಿ ಪವರಲೂಮನಲ್ಲಿ ನೇಯ್ದರೆ ಕೂಲಿ ೪೦೦ ರಿಂದ ೮೦೦ ತನಕ ಸಿಗಬಹುದು. ಇಂಥ ನೇಕಾರರಿಗೆ ಮಾಲೀಕ ರಿಂದ ಬಡ್ಡಿ ರಹಿತ ಸಾಲ ಸೌಲಭ್ಯ ಸಿಗುತ್ತದೆ.ಇವರಿಗೆ ವರ್ಷವಿಡಿ ಕೆಲಸವಿರುತ್ತದೆ.

**೩. ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ಮಹಿಳಾ ನೇಕಾರರು ಮತ್ತು ಕರ್ನಾಟಕದ ಕೈಮಗ್ಗ ಅಭಿವೃದ್ಧಿಯ ಅಡಿಯಲ್ಲಿ ನೇಕಾರಿಕೆ ಮಾಡುವವರು :** ಇಂಥ ನೇಕಾರರಿಗೆ ಬಹಳಷ್ಟು ಸೌಲತ್ತುಗಳು ಇರುತ್ತವೆ. ಮಗ್ಗಗಳು ಮತ್ತು ಬಂಡವಾಳ ಕಚ್ಚಾವಸ್ತು ನೇಕಾರರಿಗೆ ಕೊಡಲಾಗುತ್ತದೆ. ಇಲ್ಲಿ ಬಟ್ಟೆ, ನೇಯ್ಗೆ ಮಾಡಲು ಕೂಲಿ, ಇವರಿಗೆ ಸರ್ಕಾರದ ಅನೇಕ ಸೌಲಭ್ಯಗಳು ಇರುತ್ತವೆ. ಅಲ್ಲದೆ ವಸತಿಗಾಗಿ ಮನೆಯು ಕೊಡಲಾಗುತ್ತದೆ ಮತ್ತು ಖಾಲಿ ಜಾಗ ಕೊಡಲಾಗುತ್ತದೆ. ನೇಕಾರರಿಗೆ ಇನ್ಸೂರೆನ್ಸ ಸಹಿತವಿರುತ್ತದೆ. ಇವೆಲ್ಲವುಗಳ ಜೊತೆಗೆ ಆರೋಗ್ಯದ ಸೌಲಭ್ಯ ಮತ್ತು ನೇಕಾರರಿಗೆ ಭದ್ರತೆ ಇರುತ್ತದೆ . ಆದರೆ ಅದರ ಬಡ್ಡಿ ನೇಕಾರರು ಕೊಡಬೇಕಾಗುತ್ತದೆ. ಒಟ್ಟಿನಲ್ಲಿ ಮೇಲಿನ ನಾಲ್ಕು ವಿಭಾಗಗಳಲ್ಲಿ ನೇಕಾರಿಕೆಯ ಕಾರ್ಯ ನಡೆಯುತ್ತಿರುತ್ತದೆ ಹವೇಲಿ, ಬಾಗಲಕೋಟ, ಗೊನಕೊಪ್ಪ, ಕೆರೂರ್, ಕೊಂಕಣಕೊಪ್ಪ, ಕಟಗೇರಿ, ಅಗಸಿನಕೊಪ್ಪ, ಹೊನ್ನೂರು, ರಬಕವಿ, ರಾಂಪುರ, ಮಹಾಲಿಂಗಪುರ, ಸಸಾಲಟ್ಟಿ, ಕಮತಗಿ, ಅಮಿನಗಡ, ಸುಳೇಭಾವಿ, ಹನುಮಸಾಗರ, ಬದಾಮಿ, ಗುಳೇದಗುಡ್ಡ, ದೋಟಿಹಾಳ, ಕೋಟಿಕಲ್, ಪರವತಿ , ಲಾಯಗುಂದ, ಬೀಳಗಿ, ನಾಗರಾಳ, ಶಿರೂರ, ಮುಂತಾದವುಗಳಲ್ಲಿ ನೇಕಾರಿಕೆ ನಡೆಯುತ್ತಿದೆ.

**ನೇಕಾರಿಕೆ :** ಇಳಕಲ್ ಸೀರೆ, ಗುಳೇದಗುಡ್ಡದ ಖಣ, ಲುಂಗಿ, ಜಮಖಾನೆ, ಧ್ವಜದ ಬಟ್ಟೆ, ಕಂಬಳಿ ಮುಂತಾದವುಗಳು, ನೂಲಿಗೆ ಬಣ್ಣ ಹಾಕುವುದು, ತೋಡುವುದು, ಕಂಡಿಕಿ ಸುತ್ತುವುದು, ಹೊಯ್ಯುವುದು, ಅಂಟು ಹಾಕುವುದು, ಹಣಗಿ ಕೆಚ್ಚುವದು, ಮಡಿಕೆ ಹಾಕುವುದು, ಟಾಣು ಹಾಕುವುದು, ಮುಂತಾದ ಎಲ್ಲಾ ಕೆಲಸಗಳನ್ನು ಮಹಿಳೆಯರೇ ಮಾಡುತ್ತಾರೆ, ಇದಾದ ನಂತರದಲ್ಲಿ ನೇಯ್ಗೆ ಮಾತ್ರ ಪುರುಷರು ಮಾಡುವರು, ಕೆಲವು ಕಡೆ ನೇಯ್ಗೆಯು ಸಹಿತ ಮಹಿಳೆಯರೆ ಮಾಡುವರು.

**ಮಹಿಳಾ ನೇಕಾರಿಕೆಯ ಸಮಸ್ಯೆಗಳು**

**೧. ಆರ್ಥಿಕ ಸಮಸ್ಯೆ :** ಮಹಿಳಾ ನೇಕಾರರಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದಿಲ್ಲ. ಪಿತೃ ಪ್ರಧಾನ ಕುಟುಂಬ ಇರುವುದರಿಂದ ಇಲ್ಲಿ ಮಹಿಳೆಯು ಪುರುಷರ ಅಧೀನದಲ್ಲಿ ಗುಲಾಮನಾಗಿ ದುಡಿಯುತ್ತಿರುತ್ತಾಳೆ. ನೇಯ್ದ ಸೀರೆಗೆ

vivo Y72 5G

ದೊರೆತಿರುವ ಲಾಭಾಂಶ ಅಥವಾ ಕೂಲಿಯು ಪುರುಷನು ತಾನೇ ಖರ್ಚು ಮಾಡುತ್ತಾನೆ ಹೊರತು ಮಹಿಳೆಗೆ ಕೊಡುವುದಿಲ್ಲ. ನೇಯ್ಗೆಯ ಒಂದು ಕಾರ್ಯವನ್ನು ಬಿಟ್ಟರೆ ಉಳಿದೆಲ್ಲ ಕಾರ್ಯ ಮಹಿಳೆ ಮಾಡುತ್ತಿದ್ದರು ಸಹಿತ ಆಕೆ ಗಂಡನಿಗೆ ಹಣಕ್ಕಾಗಿ ಕೈಚಾಚುವಂಥದ್ದಾಗಿದೆ. ಅವಳ ಶ್ರಮದ ಪ್ರತಿಫಲವನ್ನು ಮನೆಗೆ ಕೊಟ್ಟರು ಮನೆಯ ಪರಿಸ್ಥಿತಿ ನೋಡಿದರೆ ಎರಡು ಹೊತ್ತು ಹೊಟ್ಟೆ ತುಂಬಾ ಊಟ ಮಾಡಲು ಆಗದ ಸ್ಥಿತಿ ಇರುತ್ತದೆ. ಹೇಗೆ ಕಡಿಮೆ ಸಂಬಳ ಖರ್ಚು ಜಾಸ್ತಿ ಅನ್ನುವ ರೀತಿಯಲ್ಲಿ ನೇಕಾರರ ಬದುಕು ಹಾಸು ಹೊಕ್ಕಾಗಿದೆ.

**೨. ಶೈಕ್ಷಣಿಕ ಸಮಸ್ಯೆ :** ನೇಕಾರಿಕೆಯಲ್ಲಿ ಪೂರಕ ಕೆಲಸಗಳು ಜಾಸ್ತಿ ಇದೆ ಅಂದರೆ ನೂಲಿಗೆ ಬಣ್ಣ ಹಾಕುವುದು, ತೂಡುವುದು, ಕಂಡಿಕಿ ಸುತ್ತುವುದು, ಹೊಯ್ಯುವುದು, ಅಂಟು ಹಾಕುವುದು, ಹಣಗಿ ಕೆಚ್ಚುವದು, ಮಡಿಕೆ ಹಾಕುವುದು, ಟಾಣು ಹಾಕುವುದು, ಮುಂತಾದ ಎಲ್ಲಾ ಕೆಲಸಗಳನ್ನು ಮಹಿಳೆಯರೇ ಮಾಡುತ್ತಾರೆ. ಇದರಿಂದ ಶಿಕ್ಷಣದ ಕಡೆಗೆ ಒಲವು ನೀಡದೆ ಮಹಿಳೆಯು ಅನಕ್ಷರಸ್ಥೆ ಆಗಿದ್ದನ್ನು ಕಾಣಬಹುದು. ಇತ್ತೀಚಿಗೆ ಕೆಲವೊಂದು ಜನ ಶಿಕ್ಷಣಕ್ಕೆ ಒಲವು ತೋರಿಸಿದ್ದಾರೆ ಅಲ್ಲದೆ ಶಿಕ್ಷಣಕ್ಕೆ ಒಲವು ತೋರಿದರೆ ನೇಯ್ಗೆಯ ಕೆಲಸ ಉಳಿಯುವುದು, ಇದರಿಂದ ನೇಯ್ಗೆ ಕಾರ್ಯ ನಿಲ್ಲುವುದು ಇದರಿಂದಾಗಿ ನೇಕಾರ ಮಹಿಳೆಯರು ಶಿಕ್ಷಣಕ್ಕೆ ದ್ವಿತೀಯ ಪ್ರಾಮುಖ್ಯತೆ ನೀಡಿದ್ದಾರೆ.

**೩. ಬಡತನ :** ನೇಕಾರ ಕುಟುಂಬಗಳು ೬೦% ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ಅವರ ಆದಾಯ ಕಡಿಮೆ ಇರುವುದರಿಂದ ಅವರು ಅರೆ ಹೊಟ್ಟೆ, ಅಪೌಷ್ಟಿಕತೆ ಮತ್ತು ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಳಲುತ್ತಿರುವುದು ಕಂಡು ಬರುತ್ತದೆ. ಕೆಲವೊಮ್ಮೆ ಮಹಿಳೆಯರು ಕುಟುಂಬದಲ್ಲಿರುವ ಎಲ್ಲರನ್ನು ಉಣಬಡಿಸಿ ತದನಂತರದಲ್ಲಿ ತಾನು ಕೇವಲ ನೀರು ಕುಡಿದು ಮಲಗ ಬೇಕಾದ ಪರಿಸ್ಥಿತಿ ಆ ಕುಟುಂಬದಲ್ಲಿ ಕಂಡುಬರುತ್ತದೆ.

**೪. ಆರೋಗ್ಯ ಸಮಸ್ಯೆ :** ಮಹಿಳಾ ನೇಕಾರರ ಕೆಲಸದ ಅವಧಿಯು ಸುದೀರ್ಘವಾಗಿರುತ್ತದೆ. ಅಲ್ಲದೆ ಕಣ್ಣು,ನೋವು ,ಬೆನ್ನು ನೋವು, ಕಾಲು ನೋವು,ಅಸ್ತಮಾ ಮುಂತಾದ ನೋವುಗಳಿಂದ ಮಹಿಳೆಯರು ಬಳಲುತ್ತಿರುತ್ತಾರೆ. ಇವರಲ್ಲಿ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳು ಹೆಚ್ಚಾಗಿ ಕಂಡು ಬರುತ್ತವೆ. ಹಸಿವು ಮತ್ತು ಕೆಲಸಕ್ಕೆ ಸಂಬಂಧಿಸಿದ ದೀರ್ಘ ಕಾಲದ ಕಾಯಿಲೆಗಳು ಅಂದರೆ ಕ್ಷಯ, ರಕ್ತಹೀನತೆ. ಅಸ್ತಮಾ, ಕಣ್ಣಿನ ದೃಷ್ಟಿ

ಕಡಿಮೆಯಾಗುವುದು,ವಿವಿಧ ಮೂಳೆಗಳ ಸಮಸ್ಯೆ, ಚರ್ಮ ಸಂಬಂಧಿತ ಸಮಸ್ಯೆಗಳು ಮಹಿಳೆಯರಲ್ಲಿ ಕಂಡುಬರುತ್ತವೆ.

**೫. ಮಹಿಳೆಯರ ಮೇಲೆ ಇರುವ ನಿರ್ಬಂಧನೆಗಳು :** ಮಹಿಳೆಯು ಋತುಮತಿಯಾದಾಗ ಅಶುದ್ಧವೆಂದು ತಿಳಿದು ಅವಳನ್ನು ಆ ಸಮಯದಲ್ಲಿ ನೇಕಾರಿಕೆಯ ಕಾರ್ಯದಲ್ಲಿ ನಿರ್ಲಕ್ಷಿಸಲಾಗುತ್ತದೆ. ಆದ್ದರಿಂದ ಆಕೆಗೆ ಕೆಲವು ಸಾಂಪ್ರದಾಯಿಕ ನಿಷೇಧಗಳಿವೆ. ಅಲ್ಲದೆ ಮಹಿಳೆಗೆ ದೇವರ ಪೂಜಾ ಹಕ್ಕು ಸಹಿತ ಇಲ್ಲ.ವೈದಿಕ ಅನುಯಾಯಿಗಳಾದ ಮಹಿಳೆಗೆ ಜನಿವಾರವು ಹಾಕಿಕೊಳ್ಳುವ ಹಕ್ಕು ಇಲ್ಲ. ಇಂಥ ಸಾಮಾಜಿಕ ಕಟ್ಟು ಪಾಡುಗಳು ಈಕೆಗೆ ವಿಧಿಸಿ ನಿರ್ಬಂಧಿಸಲಾಗಿದೆ. ಇಂಥ ಅನೇಕ ನಿರ್ಬಂಧನೆಗಳಿಂದ ಆಕೆಯ ಮಾನಸಿಕ ಸ್ಥೈರ್ಯ ಕಡಿಮೆಯಾಗುತ್ತದೆ.

**೬. ಕೋವಿಡ್ ೧೯ :** ೬೨೦೦೦ ಕೈ ಮಗ್ಗಗಳು ಮತ್ತು ವಿದ್ಯುತ್ಮಗ್ಗಗಳು ಸ್ಥಗಿತಗೊಂಡಿವೆ. ಅಂತರ ರಾಜ್ಯ ಚಲನೆಯ ಮೇಲಿನ ನಿರ್ಬಂಧನೆಯಿಂದ ನೇಕಾರರು ತಯಾರಿಸಿದ ಉತ್ಪನ್ನವು ಮನೆಯಲ್ಲಿಯೆ ಇಟ್ಟು ಕೊಂಡು ಮಲಗುವಂತಾಗಿದೆ .ಕೋವಿಡ್-೧೯ರಿಂದಾಗಿ ಅನೇಕ ನೇಕಾರ ಕುಟುಂಬಗಳು ಭಿಕ್ಷೆ ಬೇಡಲು ಆಗದೆ ಆಹಾರದ ಕೊರತೆಯಿಂದಾಗಿ ದಯನೀಯ ಸ್ಥಿತಿಯಲ್ಲಿದ್ದಾರೆ.ಇತ್ತೀಚೆಗೆ ಸರ್ಕಾರದ ಕೆಲವೊಂದಿಷ್ಟು ಸಹಾಯ ಅವರಿಗೆ ದೊರಕಿದೆ,ಆದರೂ ಸಹಿತ ಅವರ ಸ್ಥಿತಿ ಕಷ್ಟದಲ್ಲಿಯೇ ಇರುವುದನ್ನು ಗಮನಿಸಬಹುದು.

**ಆಧಾರ ಗ್ರಂಥಗಳು**

೧. ಪದ್ಮಶಾಲಿ ಸಮಾಜ: ವಿಠ್ಠಪ್ಪ ಗೋರಂಟ್ಲಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಮುದ್ರಣವಾದ ವರ್ಷ ೨೦೧೬

೨. ನೇಕಾರ ಸಮಾಜ ಸಂಸ್ಕೃತಿ ಮತ್ತು ಆರ್ಥಿಕ ಸ್ಥಿತಿಗತಿ ; ಸಂಪಾದಕರು ಡಾ. ಸಿ ಮಹಾದೇವನವರು, ನೇಕಾರಿಕೆ ಸ್ಮರಣ ಸಂಚಿಕೆಯು ಲೇಖನ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ೫೦ ವರ್ಷದ ಸುವರ್ಣ ಸಿರಿ ಸ್ಮರಣ ಸಂಚಿಕೆ

೩. ಇಳಕಲ ಸೀರೆ ; ಹಾಗೂ ಬಣ್ಣ, ವಿನ್ಯಾಸ-ಒಂದು ಅಧ್ಯಯನ, ಸಂಶೋಧಕರು ಪಿ.ಎಸ್. ಕಂದಗಲ ಪ್ರಬಂಧ ಸಲ್ಲಿಸಿದವರು ೨೦೦೫

೪. ಗುಳೇದಗುಡ್ಡ ಖಣಗಳು : ಮಲ್ಲಿಕಾರ್ಜುನ ಚೆನ್ನಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಮಂಟಪ ಮಾಲೆ ೧೯೧, ೨೦೧೦

೬. ಸುವರ್ಣ ಸಿರಿ ಸ್ಮರಣ ಸಂಚಿಕೆ ೧೯೬೫-೨೦೧೫

■■